**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3645/2022**

ಸಿ.ಡಬ್ಲ್ಯೂ -03

ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಜಯುರಾಮಯ್ಯ ಡಿ

ತಂದೆಯ ಹೆಸರು :- ಲೇಟ್ ದೊಡ್ಡಯ್ಯ

ವಯಸ್ಸು :- 57 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ದೊಡ್ಡಕಲ್ಲಹಳ್ಳಿ

**ಸಾಕ್ಷಿಗೆ ದಿಃ 18.06.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಪ್ರಕರಣ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 26.04.2016 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಚಾ.ಸಾ. 1 ಅವರ ಮನೆಯ ಹತ್ತಿರ ನಾನು ಚಾ.ಸಾ. 2 ಮತ್ತು ಚಾ.ಸಾ. 4 ಮಾತನಾಡುತ್ತಾ ಕುಳಿತಿದ್ದಾಗ ಚಾಸಾ. 1 ಗಾಬರಿಯಿಂದ ಮನೆಗೆ ಬಂದಿದ್ದು ಅವರಿಗೆ ವಿಚಾರಿಸಲಾಗಿ ದೊಡ್ಡಕಲ್ಲಹಳ್ಳಿ ಗ್ರಾಮದ ಏಡೆತಕ್ಕಲು ಹತ್ತಿರ ಕುರಿಗಳನ್ನು ಮೇಯಿಸಿಕೊಂಡು ಕುಳಿತಿದ್ದಾಗ ಮೇಳೆ ಕಡೆಯಿಂದ ಚಿಕ್ಕಕೆಂಪಯ್ಯನ ಮಗ ರಾಮಕೃಷ್ಣಯ್ಯ (ಆರೋಪಿ) ಅವಳೊಂದಿಗೆ ಸಲಿಗೆಯಿಂದ ಮಾತನಾಡುತ್ತಾ ಇದ್ದಕ್ಕಿಂದ್ದಂತೆ ತಬ್ಬಿಕೊಂಡು ಜವಳಿಕಡ್ಡಿಯ ಕಡೆ ಎಳೆದುಕೊಂಡು ಹೋಗಿದ್ದು ಅದಲಕ್ಕೆ ಯಾಕೆ ಈ ರೀತಿ ಮಾಡುತ್ತೀದ್ದೀಯಾ ನಿನಗೆ ಮಾನ ಮರ್ಯಾದೆ ಇಲ್ಲವೆಂದು ಬೈದರು ಸಹ ಬಿಡದೆ ಸೀರೆಯನ್ನು ಹಿಡಿದು ಎಳೆದಾಡಿ ಮಾನಭಂಗ ಮಾಡಲು

ಪ್ರಯತ್ನ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಾ.ಸಾ. 2 ತಪ್ಪಿಸಿಕೊಂಡು ಓಡಿ ಬರುವಾಗ ಎಡಗಾಲಿಗೆ ಕಲ್ಲಿನಿಂದಹೊಡೆದು ನೋವುಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಚಾ,ಸಾ. 2 ಮತ್ತು 4 ಸ್ಥಳಕ್ಕೆ ಹೋಗಿ ಆರೋಪಿಯನ್ನು ಹುಡುಕಾಡಲಾಗಿ ಸಿಕ್ಕಿರಲಿಲ್ಲ. ಈ ಕುರಿತು ರಾಜಿ ಪಂಚಾಯಿತಿ ಮಾಡೋಣಾ ಅಂತ ಗ್ರಾಮಸ್ಥರ ಮಾತಿನ ಮೇರೆಗೆ ದೂರನ್ನು ಸ್ವಲ್ಪ ದಿನ ನೀಡಿರಲಿಲ್ಲ. ಈ ಕುರಿತು ನಾನು ದಿಃ 03.05.2018 ರಂದು ಪೊಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ 4 ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನೀವೇದಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲಃ**

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**